# ದಿನಾಂಕ 27-07-2023 ರಂದು ಮಧ್ಯಾಹ್ನ 2.30 ಕ್ಕೆ ಮುಖ್ಯ ಕಾರ್ಯದರ್ಶಿಗಳು ಕರ್ನಾಟಕ ಸರ್ಕಾರ ಇವರ ಅದ್ಯಕ್ಷತೆಯಲ್ಲಿ ನಡೆದ ರಾಜ್ಯದ ನಾಲ್ಕನೆ ಬ್ರಾಡ್ ಬ್ಯಾಂಡ್ ಸಮಿತಿ ಸಭೆಯ ನಡವಳಿಗಳು

ಸಭೆಗೆ ಹಾಜರಾದ ಸದಸ್ಯರು ಹಾಗು ಅಧಿಕಾರಿಗಳು **(ಪಟ್ಟಿಯನ್ನುಅನುಬಂಧದಲ್ಲಿ ನೀಡಲಾಗಿದೆ).**

ಸಭೆಗೆ ಹಾಜರಾದ ಸದಸ್ಯರು ಮತ್ತು ಮುಖ್ಯ ಕಾರ್ಯದರ್ಶಿಗಳಿಗೆ ಸ್ವಾಗತ ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು. ಅದ್ಯಕ್ಷತೆ ವಹಿಸಿದ್ದ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಸಭೆಯ ಕಾರ್ಯಸೂಚಿಯಂತೆ ವಿಷಯಗಳ ಮಂಡನೆ ಮಾಡಲು ತಿಳಿಸಿದರು. ಸಭೆಯಲ್ಲಿ ಕೆಳಕಂಡ ವಿಷಯಗಳ ಮೇಲೆ ಚರ್ಚೆ ನಡೆಸಿ ನಿರ್ಣಯಗಳನ್ನು ಕೈಗೊಳ್ಳಲಾಯಿತು.

**ವಿಷಯ: 1. ರಾಜ್ಯದಲ್ಲಿ ಸಂಪರ್ಕ ಜಾಲವಿಲ್ಲದ (ನೆಟ್ವರ್ಕ್ ಸೌಲಭ್ಯ) ಗ್ರಾಮಗಳಿಗೆ ಸಂಪರ್ಕ ಜಾಲ ಒದಗಿಸುವ "4G Saturation Project ಯೋಜನೆಯ ಪ್ರಗತಿ ಪರಿಶೀಲನೆ.**

ನಿರ್ದೇಶಕರು DOT LSA-RIರವರು ಈ ಯೋಜನೆ ಕುರಿತಂತೆ ಸಭೆಗೆ ಸಂಕ್ಷಿಪ್ತ ಮಾಹಿತಿಯನ್ನು ನೀಡಿದರು.

SBC ಸಮಿತಿಯ ಸದಸ್ಯ ಕಾರ್ಯದರ್ಶಿಯಾಗಿರುವ ವಿಮಾತಂ, ಜೈತಂ ಮತ್ತು ವಿತಂ, ಅಪರ ಮುಖ್ಯ ಕಾರ್ಯದರ್ಶಿಗಳು ಮಾತನಾಡಿ ರಾಜ್ಯದಲ್ಲಿ ನೆಟ್ ವರ್ಕ್ ಸೌಲಭ್ಯವಿಲ್ಲದೆ ಇರುವ 2,591 ಗ್ರಾಮಗಳಿವೆ. ಅವುಗಳಿಗೆ ನೆಟ್ ವರ್ಕ್ ಕವರೇಜ್ ಕಲ್ಪಿಸಲು ಒಟ್ಟು 829 ಟವರ್ ಗಳ ನಿರ್ಮಾಣಕ್ಕೆ BSNL ಯೋಜನೆ ರೂಪಿಸಿದೆ. ಇದಕ್ಕೆ ಬೇಕಾಗುವ ಸ್ಥಳಗಳನ್ನು ಜಿಲ್ಲಾಡಳಿತ ಮತ್ತು BSNL ಜಂಟಿಯಾಗಿ ಸರ್ವೇ ನಡೆಸಿ ಇದುವರೆಗೆ 814 ಸ್ಥಳಗಳನ್ನು ಗುರುತಿಸಿದೆ. ಈ ಸ್ಥಳಗಳು ಸರ್ಕಾರಿ ಭೂಮಿ, ಗ್ರಾಮಠಾಣ, ಅರಣ್ಯ, ಖಾಸಗಿ ಮತ್ತು BSNL ಒಡೆತನದ ಜಾಗಗಳಲ್ಲಿ ಬರುತ್ತಿದ್ದು ಆ ಸ್ಥಳಗಳಲ್ಲಿ 2,000 ಚ. ಅ. ಜಾಗವನ್ನು ಟವರ್ ನಿರ್ಮಾಣಕ್ಕಾಗಿ BSNLಗೆ ವಹಿಸಿ ಕೊಡಲು ಸಂಬಂಧಿತ ಜಿಲ್ಲೆಗಳ ಜಿಲ್ಲಾಧಿಕಾರಿಗಳು, ಜಿಲ್ಲಾ ಪರಿಷತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು ಮತ್ತು PCCF (Forest Conservation) ರವರಿಗೆ ತಿಳಿಸಲಾಗಿದೆ. ಕೇಂದ್ರ ಸರ್ಕಾರದ ಸೂಚನೆಯಂತೆ ಈ ನಿವೇಶನಗಳನ್ನು ಉಚಿತವಾಗಿ/ವಿನಾಯಿತಿ ದರದಲ್ಲಿ BSNLಗೆ ಹಂಚಿಕೆ ಮಾಡಲು ಕಾನೂನುಗಳಲ್ಲಿ ಅವಕಾಶಗಳನ್ನು ಮಾಡಿಕೊಳ್ಳಲಾಗಿದೆ. ಜಂಟಿ ಸರ್ವೆ ಮೂಲಕ ಮೊದಲ ಹಂತದಲ್ಲಿ ಗುರುತಿಸಿದ್ದ ಸ್ಥಳಗಳ ಪೈಕಿ ಕಂದಾಯ ಮತ್ತು ಗ್ರಾಮ ಪಂಚಾಯ್ತಿ ಒಡೆತನದ ಜಾಗಗಳಲ್ಲಿ BSNL ಕೋರಿದ್ದ 427 ನಿವೇಶನಗಳನ್ನು ಈಗಾಗಲೆ ವಹಿಸಿಕೊಡಲಾಗಿದೆ. ಉಳಿದ 52 ನಿವೇಶನಗಳನ್ನು 15 ದಿನಗಳೊಳಗೆ ವಹಿಸಿ ಕೊಡಲು ಕ್ರಮವಹಿಸಲಾಗಿದೆ. ಅರಣ್ಯ ಇಲಾಖೆಯ ಜಾಗಗಳಲ್ಲಿ ಗುರುತಿಸಲಾಗಿರುವ ನಿವೇಶನ/ಜಾಗಗಳನ್ನು ವಹಿಸಿಕೊಡುವ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ಕೋರಿದರು.

ಮುಖ್ಯ ಪ್ರಧಾನ ವ್ಯಸ್ಥಾಪಕರು (CGM) BSNL ರವರು ಮಾತನಾಡಿ USOF ನಿಧಿಯಿಂದ ಅನುಧಾನ ಪಡೆದು ಅನುಷ್ಠಾನಗೊಳಿಸುತ್ತಿರುವ ಈ ಯೋಜನೆಯು ಕಾಲಮಿತಿಯ ಕಾರ್ಯಕ್ರಮ ವಾಗಿದ್ದು ಇದನ್ನು ಡಿಸೆಂಬರ್ 2023ರ ಒಳಗಾಗಿ ಮಾಡಿ ಮುಗಿಸಬೇಕಾಗಿದೆ. ಇದರ ಅನುಷ್ಠಾನಕ್ಕೆ ರಾಜ್ಯ ಸರ್ಕಾರವು ಸಕಾರಾತ್ಮಕವಾಗಿ ಸ್ಪಂದಿಸಿ ಪೂರ್ಣ ಸಹಕಾರ ನೀಡಿದೆ. ಅರಣ್ಯ ಭೂಮಿಯಲ್ಲಿ ಗುರುತಿಸಿದ ಸ್ಥಳಗಳನ್ನು ಶೀಘ್ರವಾಗಿ ಕೊಡಿಸಿ ಕೊಟ್ಟಲ್ಲಿ ನಿಗದಿತ ಸಮಯದೊಳಗೆ BSNL ಈ ಎಲ್ಲಾ ಸ್ಥಳಗಳಲ್ಲಿ ಟವರ್‌ಗಳ ನಿರ್ಮಾಣ ಮಾಡಿ ಆ ಎಲ್ಲಾ ಗ್ರಾಮಗಳಿಗೆ ನೆಟ್‌ವರ್ಕ್ ಸೌಲಭ್ಯ ಒದಗಿಸಲು ಬದ್ದವಾಗಿದೆಯೆಂದು ಸಭೆಗೆ ತಿಳಿಸಿದರು.

PCCF (Forest Conservation) ರವರು ವಿವರಣೆ ನೀಡಿ ಅರಣ್ಯ ಪ್ರದೇಶದಲ್ಲಿ ಸ್ಥಳ ಮಂಜೂರಾತಿಗೆ ಬಳಕೆ ಮಾಡುವ "PARIVESH Portal" ನಲ್ಲಿ ನಿಗದಿಯಾದ ಮಾನದಂಡಗಳ ಪ್ರಕಾರ BSNL ಅರ್ಜಿಗಳನ್ನು ಅಪ್ ಲೋಡ್ ಮಾಡಲು ಸಾಧ್ಯ ಆಗದಿರುವುದರಿಂದ ವಿಳಂಬವಾಗಿದೆ. ಈಗ ಈ ಯೋಜನೆಗಾಗಿ ನಿವೇಶನ ಮಂಜೂರು ಮಾಡಲು ಭೌತಿಕ

ಪ್ರಸ್ತಾವನೆಗಳನ್ನು ಸ್ವೀಕರಿಸಿ ಇತ್ಯರ್ಥಪಡಿಸಲು ಕೇಂದ್ರ ಸರ್ಕಾರದಿಂದ ವಿಶೇಷ ಅನುಮತಿ ಸಿಕ್ಕಿದೆ. ಅದರಂತೆ BSNL ಅರ್ಜಿ ಸಲ್ಲಿಸಿದಲ್ಲಿ ಅವುಗಳನ್ನು ಪರಿಶೀಲಿಸಿ ಎರಡು ವಾರಗಳಲ್ಲಿ ಅವರಿಗೆ ಹಂಚಿಕೆ ಪತ್ರ ಕೊಡಿಸುವ ವ್ಯವಸ್ಥೆ ಮಾಡಲಾಗುವುದೆಂದು ತಿಳಿಸಿದರು.

ಆನ್‌ಲೈನ್ ಮೂಲಕ ಸಭೆಯಲ್ಲಿ ಪಾಲ್ಗೊಂಡ ಕಂದಾಯ ಇಲಾಖೆಯ, ಪ್ರಧಾನ ಕಾರ್ಯದರ್ಶಿಗಳು ತಮ್ಮ ಇಲಾಖೆಯಲ್ಲಿ ಬಾಕಿ ಉಳಿದಿರುವ ಎಲ್ಲಾ ಪ್ರಕರಣಗಳನ್ನು ಶೀಘ್ರವಾಗಿ ಇತ್ಯರ್ಥ ಮಾಡಿಸುವುದಾಗಿ ಸಭೆಗೆ ತಿಳಿಸಿದರು.

ಮುಖ್ಯ ಕಾರ್ಯದರ್ಶಿಗಳು ಮಾತನಾಡಿ ಇದು ಆದ್ಯತೆಯ ಕಾರ್ಯಕ್ರಮವಾಗಿದ್ದು ಪ್ರಧಾನ ಮಂತ್ರಿಗಳು ಸ್ವಯಂ ಪರಿಶೀಲನೆಗೆ ತೆಗೆದುಕೊಳ್ಳುತ್ತಿರುವ "ಪ್ರಗತಿ" ಕಾರ್ಯಕ್ರಮಗಳ ಪಟ್ಟಿಯಲ್ಲಿ ಸೇರಿದೆ. ಇದುವರೆಗೆ ಹಂಚಿಕೆಯಾಗದೆ ಇರುವ ನಿವೇಶನಗಳು ಯಾರ ಒಡೆತನದಲ್ಲಿವೆ ಮತ್ತು ಏಕೆ ಹಂಚಿಕೆಯಾಗಿಲ್ಲ ಎಂಬುದನ್ನು ತಿಳಿಯಬಯಸಿದಾಗ ಕೆಳಕಂಡ ಕೋಷ್ಟಕದ ಮೂಲಕ ವಸ್ತುಸ್ಥಿತಿ ಯನ್ನು ಸಭೆಗೆ ವಿವರಿಸಲಾಯಿತು.

| Dept Name | Locations identified | Land Applied | Land allotted | Land Pending |
|---|---|---|---|---|
| **PANCHYAT** | 101 | 101 | 99 | 2 |
| **REVENUE** | 418 | 367 | 317 | 50 |
| **FOREST** | 164 | 70 | 0 | 70 |
| **BSNL (own sites)** | 30 | 30 | 30 | 0 |
| **BSNL (Pvt. land)** | 49 | 25 | 25 | 0 |
| **BSNL (locations pending for identification in 1st phase)** | 67 | 52 | 11 | 41 |
| **Total** | **829** | **645** | **482** | **163** |

ಈ ಬಗ್ಗೆ ಸುಧೀರ್ಘ ಚರ್ಚೆ ನಡೆಸಿದ ನಂತರ ಸಭೆಯಲ್ಲಿ ಕೆಳಕಂಡ ನಿರ್ಣಯಗಳನ್ನು ಕೈಗೊಳ್ಳಲಾಯಿತು.

1. ಮಂಜೂರಾತಿಗೆ ಬಾಕಿ ಇರುವ ಪ್ರಕರಣಗಳ ಪೈಕಿ ಮೊದಲನೇ ಹಂತದಲ್ಲಿ ಸಲ್ಲಿಕೆಯಾಗಿ ಕಂದಾಯ ಇಲಾಖೆ ಮತ್ತು ಗ್ರಾಮ ಪಂಚಾಯತಿಗಳಲ್ಲಿ ಇತ್ಯರ್ಥಕ್ಕೆ ಬಾಕಿ ಉಳಿದಿರುವ ಎಲ್ಲಾ 52 ಪ್ರಕರಣಗಳನ್ನು ಹದಿನೈದು ದಿನಗಳಲ್ಲಿ ಇತ್ಯರ್ಥ ಪಡಿಸಿ ನಿವೇಶನಗಳನ್ನು BSNL ಗೆ ಹಸ್ತಾಂತರಿಸಲು ಆಯಾ ಇಲಾಖಾ ಮುಖ್ಯಸ್ಥರು ಕ್ರಮ ಕೈಗೊಳ್ಳುವುದು.
2. ಅರಣ್ಯ ಇಲಾಖೆ ವ್ಯಾಪ್ತಿಯಲ್ಲಿ ಗುರುತಿಸಿರುವ ಮೊದಲ ಹಂತದ 164 ಪ್ರಕರಣಗಳು ಮತ್ತು 2ನೇ ಹಂತದ 31 ಪ್ರಕರಣಗಳ ಭೌತಿಕ ಪ್ರಸ್ತಾವನೆಗಳನ್ನು ಎರಡು ವಾರಗಳಲ್ಲಿ BSNL ಅರಣ್ಯ ಇಲಾಖೆಗೆ ಸಲ್ಲಿಸುವುದು.
3. ಅರಣ್ಯ ಇಲಾಖೆಯು BSNL ನಿಂದ ಸಲ್ಲಿಕೆಯಾಗುವ ಪ್ರಸ್ತಾವನೆಗಳನ್ನು ಅವು ಸಲ್ಲಿಕೆಯಾದ ಎರಡು ವಾರಗಳ ಒಳಗೆ ಪರಿಶೀಲಿಸಿ ಇತ್ಯರ್ಥ ಪಡಿಸಿ ನಿವೇಶನಗಳನ್ನು ವಹಿಸಿಕೊಡುವುದು.

4. ಕಂದಾಯ ಇಲಾಖೆ ಒಡೆತನದ ಜಾಗಗಳಲ್ಲಿ ಮೊದಲ ಹಂತದಲ್ಲಿ ಗುರುತಿಸಿದ 51 ಸ್ಥಳಗಳ ಪ್ರಸ್ತಾವನೆಗಳನ್ನು ವಿಳಂಬ ಮಾಡದೆ ಸಂಬಂಧಿಸಿದ ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿ, ಅದರ ವಿವರವನ್ನು ವಿಮಾತಂ ಮತ್ತು ಜೈತಂ ಇಲಾಖೆಯ ಟೆಲಿಕಾಂ ವಿಭಾಗಕ್ಕೆ ಕಳಿಸುವುದು.
5. ಎರಡನೆ ಹಂತದಲ್ಲಿ ಗುರುತಿಸಲು ಬಾಕಿ ಇದ್ದ 67 ಸ್ಥಳಗಳು ಯಾರ ಅಧೀನದಲ್ಲಿ ಬರಲಿವೆ ಮತ್ತು ಅವುಗಳ ಹಂಚಿಕೆಗೆ ಕೋರಿ ಯಾರಿಗೆ ಅರ್ಜಿ ಸಲ್ಲಿಕೆಯಾಗಿದೆ ಎಂಬುದರ ವಿವರವನ್ನು ವಿಮಾತಂ ಮತ್ತು ಜೈತಂ ಇಲಾಖೆಯ, ಟೆಲಿಕಾಂ ವಿಭಾಗಕ್ಕೆ ಕಳಿಸಿಸುವುದು.
6. ಈ ಯೋಜನೆಗಾಗಿ ಸ್ಥಳ ಮಂಜೂರಾತಿಗೆ ಬಾಕಿ ಉಳಿದಿರುವ ಪ್ರಸ್ತಾವನೆಗಳ ವಿವರಗಳನ್ನು ಜಿಲ್ಲಾ ಮಟ್ಟದ ಅಧಿಕಾರಿಗಳಿಂದ ಸಂಗ್ರಹಿಸಿ BSNL ಮತ್ತು ವಿಮಾತಂ ಮತ್ತು ಜೈತಂ ಇಲಾಖೆಯಲ್ಲಿ ಒಂದೇ ರೀತಿಯ ಅಂಕಿ ಅಂಶಗಳು ಇರುವಂತೆ ನೋಡಿಕೊಳ್ಳುವುದು ಮತ್ತು ಅದನ್ನು ಅರಣ್ಯ, ಗ್ರಾಮೀಣ ಅಭಿವೃಧ್ಧಿ ಮತ್ತು ಕಂದಾಯ ಇಲಾಖೆಗಳ ಮುಖ್ಯಸ್ಥರಿಗೆ ಕಳಿಸುವುದು.

**(ಕ್ರಮ:** ಅಪರ ಮುಖ್ಯ ಕಾರ್ಯದರ್ಶಿಗಳು, ವಿಮಾತಂ, ಜೈತಂ ಮತ್ತು ವಿತಂ ಇಲಾಖೆ, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ, ಇಲಾಖೆ, ಗ್ರಾಮೀಣ ಅಭಿವೃಧ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, PCCF, (ಅರಣ್ಯ ಸಂರಕ್ಷಣೆ), ಮುಖ್ಯ ಪ್ರಧಾನ ವ್ಯವಸ್ಥಾಪಕರು, BSNL, ನಿರ್ದೇಶಕರು ಪಂಚಾಯತ್ ರಾಜ್, ವಿಮಾತಂ ಮತ್ತು ಜೈತಂ ಇಲಾಖೆ ಮತ್ತು ಟೆಲಿಕಾಂ ಸಲಹೆಗಾರರು, ಕಿಟ್ಸ್).

**ವಿಷಯ: 2. RoW ಅರ್ಜಿಗಳ ವಿಲೇವಾರಿ ಪ್ರಗತಿ ಪರಿಶೀಲನೆ**

ಟೆಲಿಕಾಂ ಮೂಲ ಸೌಕರ್ಯಗಳ ಸ್ಥಾಪನೆಗೆ ಕೇಂದ್ರ ಸರ್ಕಾರದಿಂದ ಪರವಾನಗಿ ಪಡೆದು ಬಂದಿರುವ TIP/TSP ಕಂಪನಿಗಳು ROW ಗೆ ಅನುಮತಿ ಕೋರಿ ಸಲ್ಲಿಸಿರುವ ಅರ್ಜಿಗಳ ವಿಲೇವಾರಿ ಪ್ರಗತಿಯ ಪಕ್ಷಿ ನೋಟವನ್ನು ಕೆಳಗಿನಂತೆ ಸಭೆಯ ಮುಂದೆ ಮಂಡಿಸಲಾಯಿತು.

| Dept. | Tower Pending | OFC Pending | Total | > 60 Days | Payment Pending | Rejected |
|---|---|---|---|---|---|---|
| BBMP | 153 | 1012 | 1165 | 679 | 0 | 146 |
| UDD | 114 | 232 | 346 | 284 | 0 | 9 |
| RDPR | 141 | 0 | 141 | 0 | 2066 | 15 |
| **Total** | **408** | **1244** | **1652** | **963** | **2066** | **170** |

ROW ಅರ್ಜಿಗಳ ವಿಲೇವಾರಿ ಪ್ರಗತಿಯನ್ನು ಪರಿಶೀಲಿಸಿದ ಅಧ್ಯಕ್ಷರು BBMP ಮತ್ತು ನಗರಾಭಿವೃಧ್ಧಿ ಇಲಾಖೆಯಲ್ಲಿ 60 ದಿನಗಳು ಕಳೆದರು ಅರ್ಜಿಗಳ ವಿಲೇವಾರಿ ಮಾಡದೇ ಇರುವುದನ್ನು ಗಂಭೀರವಾಗಿ ಪರಿಗಣಿಸಿದರು. ಈ ಕುರಿತು ವಿವರಣೆ ನೀಡಿದ ಬಿಬಿಎಂಪಿ ಮುಖ್ಯ ಆಯುಕ್ತರು TIP/TSP ಸಂಸ್ಥೆಗಳು ಬಿಬಿಎಂಪಿ ಅನುಮತಿ ಇಲ್ಲದೆ ಎಲ್ಲಿ ಬೇಕೆಂದರಲ್ಲಿಯೇ ಕೇಬಲ್ ಗಳನ್ನು ಅಳವಡಿಸಿಕೊಂಡಿದ್ದು ಅವು ಸಾರ್ವಜನಿಕರು ಮತ್ತು ನ್ಯಾಯಾಲಯಗಳ ಆಕ್ಷೇಪಕ್ಕೆ ಕಾರಣವಾಗಿವೆ. ಈಗ ROW ಅನುಮತಿ ಕೋರಿ ಸಲ್ಲಿಕೆಯಾಗಿರುವ ಅರ್ಜಿಗಳಲ್ಲಿ ಅಕ್ರಮವಾಗಿ ಅಳವಡಿಸಿರುವ OFC ಕೇಬಲ್ ಗಳ ಸಕ್ರಮದ ಪ್ರಕರಣಗಳು ಸೇರಿವೆ. ಹೊಸ ಕೇಬಲ್ ಅಳವಡಿಕೆಗೆ ಅನುಮತಿ ಕೊಡಲು ಸಮಸ್ಯೆಯಿಲ್ಲ. ಆದರೆ ಅಕ್ರಮವಾಗಿ ಅಳವಡಿಕೆಯಾಗಿರುವ ಕೇಬಲ್ ಗಳ ಸಕ್ರಮಕ್ಕೆ ಒಂದು ನಿಯಮ ರೂಪಿಸುವ ಚಿಂತನೆ ನಡೆದಿದೆ. ಹೀಗಾಗಿ ಅಕ್ರಮವಾಗಿ ಅಳವಡಿಕೆಯಾಗಿರುವ ಕೇಬಲ್ ಗಳನ್ನು ಗುರುತಿಸಲು ಒಂದು ಸಮೀಕ್ಷೆಗೆ ಚಾಲನೆ ಕೊಡಲಾಗಿದೆ. ಅಲ್ಲಿ ಅಪಾಯ ಸ್ಥಿತಿಯಲ್ಲಿರುವ ಕೇಬಲ್ ಗಳನ್ನು ಕತ್ತರಿಸಿ ಹಾಕಲಾಗುತ್ತಿದೆ ಎಂದು ಮುಖ್ಯ ಆಯುಕ್ತರು ತಿಳಿಸಿದರು.

RJIL ನಿಂದ ಬಂದಿದ್ದ ಅಧಿಕಾರಿಗಳು ಈ ಕೇಬಲ್ ಗಳು ಲೈವ್ ಕೇಬಲ್ ಗಗಳಾಗಿದ್ದು ಮುಂಗಡ ಮಾಹಿತಿ ಇಲ್ಲದೆ ಎಲ್ಲಡೆ ಕೇಬಲ್ ಕತ್ತರಿಸಿ ಹಾಕುತ್ತಿರುವುದರಿಂದ ಕಂಪನಿಯ ಜೊತೆಗೆ ಸಾರ್ವಜನಿಕರಿಗೂ ತೊಂದರೆಯಾಗುತ್ತಿದೆ ಎಂದು ತಿಳಿಸಿದರು.

ಅಪರ ಮುಖ್ಯ ಕಾರ್ಯದರ್ಶಿಗಳು, UDD ರವರು ಹೊಸ ಕೇಬಲ್ ಅಳವಡಿಕೆಗೆ ಭಾರತ ಸರ್ಕಾರ ಹೊರಡಿಸಿರುವ ROW ನೀತಿಯಲ್ಲಿ ನಿಗಧಿಯಾಗಿರುವ ಕಿಲೋ ಮೀಟರಿಗೆ ರೂಪಾಯಿ 1000/- ಶುಲ್ಕ ಪಡೆದು ಅನುಮತಿ ನೀಡಲು ಈಗಾಗಲೇ ಆದೇಶ ಹೊರಡಿಸಲಾಗಿದೆ. ಹೀಗಾಗಿ ಹೊಸ ಕೇಬಲ್ ಅನುಮತಿಗೆ ಸಮಸ್ಯೆ ಇಲ್ಲ ಎಂದು ತಿಳಿಸಿದರು.

ನಗರಾಭಿವೃದ್ಧಿ ಇಲಾಖೆಯ ಪೌರಾಡಳಿತ ವಿಭಾಗದಲ್ಲಿ ನಿರ್ವಹಣೆಯಾಗುತ್ತಿರುವ UDD ಪೋರ್ಟಲ್ ನಲ್ಲಿ ಬಾಕಿ ಇರುವ ಅರ್ಜಿಗಳ ವಿಲೇವಾರಿಗೆ ಸರಿಯಾದ ಕ್ರಮ ಆಗುತ್ತಿಲ್ಲ. ಅಲ್ಲಿ ಹೆಚ್ಚುವರಿಯಾಗಿ ನಮುನೆ 3 ರ ಧಾಖಲೆಯನ್ನು ಕೇಳುತ್ತಿರುವುದರಿಂದ ಅಸ್ತಿತ್ವದಲ್ಲಿರುವ ಟವರ್ ಗಳ ನೊಂದಣಿ ಮಾಡಿಸಲು ಸಾಧ್ಯ ಆಗುತ್ತಿಲ್ಲ. ಹೊಸ ಟವರ್ ನಿರ್ಮಾಣಕ್ಕೂ ಅರ್ಜಿ ಅಪ್ ಲೋಡ್ ಮಾಡಲು ಸಾಧ್ಯವಾಗುತ್ತಿಲ್ಲ. ಈ ದಾಖಲೆಯನ್ನು ROW ನಿಯಮಗಳಲ್ಲಾಗಲಿ ಅಥವಾ ಇತರೆ ಪೋರ್ಟಲ್ ಗಳಲ್ಲಾಗಲಿ ಕೇಳುತ್ತಿಲ್ಲವೆಂದು ತಿಳಿಸಲಾಯಿತು. ಮಧ್ಯೆ ಪ್ರವೇಶಿಸಿದ DOT ಅಧಿಕಾರಿಗಳು ಈ ದಾಖಲೆಯನ್ನು ಇತ್ತೀಚೆಗೆ UDD ಪೋರ್ಟಲ್ ನಿಂದ ತೆಗೆದು ಹಾಕಲಾಗಿದೆ ಎಂದು ತಿಳಿದುಬಂದಿದೆ ಎಂದಾಗ ಅದು ನಿಜವೆಂದು ಪೌರಾಡಳಿತ ಇಲಾಖೆಯ ನಿರ್ದೇಶಕರು ಮತ್ತು ಕಾರ್ಯದರ್ಶಿಗಳು ಸಭೆಗೆ ತಿಳಿಸಿದರು.

ಲೋಕೋಪಯೋಗಿ ಇಲಾಖೆಯಲ್ಲಿ RoW ಅನುಮತಿ ಕೊಡುವುದನ್ನು ತಡೆಹಿಡಿಯಲಾಗಿದೆ ಎಂಬ ವಿಚಾರವು ಸಭೆಯ ಗಮನಕ್ಕೆ ಬಂದಾಗ ಆ ಬಗ್ಗೆ ಮಾರ್ಗ ಸೂಚಿಯನ್ನು ರೂಪಿಸುತ್ತಿರುವುದಾಗಿ ಪ್ರಧಾನ ಕಾರ್ಯದರ್ಶಿಗಳು ತಿಳಿಸಿದರು.

ರಾಜ್ಯಕ್ಕೆ ಏಕೀಕೃತ RoW ನಿಯಮಗಳನ್ನು ಜಾರಿಗೊಳಿಸುವ ಕುರಿತು ನಿಯಮಗಳ ರಚನೆಯ ಪ್ರಸ್ತುತ ಹಂತವನ್ನು ಅಧ್ಯಕ್ಷರು ತಿಳಿಯಬಯಸಿದಾಗ ಆ ನಿಯಮಗಳ ರಚನೆಯಾಗಿದ್ದು ಅದು ಸಚಿವ ಸಂಪುಟಕ್ಕೆ ಮಂಡಿಸಲು ಸಿದ್ಧವಾಗಿರುತ್ತದೆ. ಹೊಸ ಸರ್ಕಾರ ಬಂದ ನಂತರ ಮತ್ತೊಮ್ಮೆ ಅದನ್ನು ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹಾಗು ನಗರಾಭಿವೃದ್ಧಿ ಇಲಾಖೆಗಳ ಸಹಮತಿಗೆ ಕಳಿಸಲಾಗಿದೆ. RDPR ಗೆ ಹೋಗಿದ್ದ ಕಡತವು ವಾಪಸಾಗಿದೆ. ನಗರಾಭಿವೃಧ್ಧಿ ಇಲಾಖೆಗೆ ಹೋಗಿರುವ ಕಡತವು ಇನ್ನೂ ಬಂದಿರುವುದಿಲ್ಲ ಎಂದು ತಿಳಸಲಾಯಿತು. ಅಧ್ಯಕ್ಷರು ಮಾತನಾಡಿ ರಾಜ್ಯದ ನಾಗರಿಕರಿಗೆ 5G ಸೇವೆಯ ಸೌಲಭ್ಯ ಶೀಘ್ರವಾಗಿ ಲಭಿಸಲು ಏಕೀಕೃತ ROW ನಿಯಮವನ್ನು ತರುವುದು ಅವಶ್ಯವಿದೆ. ಇದನ್ನು ಸಕ್ಷಮ ಪ್ರಾಧಿಕಾರಕ್ಕೆ ಮನವರಿಕೆ ಮಾಡಿ ಇಲಾಖೆ ಅಭಿಪ್ರಾಯದೊಂದಿಗೆ ತುರ್ತಾಗಿ ಆಡಳಿತ ಇಲಾಖೆಗೆ ಕಳುಹಿಸಿಕೊಡಲು ನಗರಾಭಿವೃಧ್ಧಿ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಕಾರ್ಯದರ್ಶಿಗಳಿಗೆ ತಿಳಿಸಿದರು.

ROW ಪೋರ್ಟಲ್ ಗಳ ನಿರ್ವಹಣೆಯಲ್ಲಿಯು ಭಾರತ ಸರ್ಕಾರದ ಮಾರ್ಗ ಸೂಚಿಗಳು ಸರಿಯಾಗಿ ಪಾಲನೆಯಾಗುತ್ತಿಲ್ಲವೆಂದು ಸಭೆಯ ಗಮನಕ್ಕೆ ತಂದು ಅದರ ಸಂಕ್ಷಿಪ್ತ ವಿವರವನ್ನು ಕೆಳಗಿನಂತೆ ನೀಡಲಾಯಿತು.

| Sl no | Pending issues | BBMP | UDD | RDPR |
|---|---|---|---|---|
| 1 | **Provision of Deemed approval** | **Pending** | **Pending** | Yes |
| 2 | Implementation of ROW charges as Rs 1 per Mtr. | Pending | Yes | Yes |
| 3 | Central State Integration | Pending | Pending | Pending |
| 4 | Removal of Form-3 | NA | Pending | NA |

ಚರ್ಚೆಯನಂತರ ಕೆಳಕಂಡ ತೀರ್ಮಾನಗಳನ್ನು ಕೈಗೊಳ್ಳಲಾಯಿತು.

1. ROW ಅರ್ಜಿಗಳ ವಿಲೇವಾರಿಯು ಸೇರಿದಂತೆ UDD ಗೆ ಸಂಬಂಧಿಸಿದ ಇತರೆ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ACS UDD ರವರು ದಿನಾಂಕ 31.07.2023 ರಂದು ಬೆಳಿಗ್ಗೆ 09.30 ಕ್ಕೆ ಕಾರ್ಯದರ್ಶಿಗಳು ನಗರಾಭಿವೃದ್ಧಿ ಇಲಾಖೆ, ಬಿಬಿಎಂಪಿ ಮುಖ್ಯ ಆಯುಕ್ತರು, ಪೌರಾಡಳಿತ ಇಲಾಖಾ ನಿರ್ದೇಶಕರು (DMA) ಮತ್ತು ಜಂಟಿ ನಿರ್ದೇಶಕರು (MRC), DoT ಅಧಿಕಾರಿಗಳು ಹಾಗು, ಟೆಲಿಕಾಂ ಮೂಲ ಸೌಕರ್ಯ ಸಂಸ್ಥೆಗಳ ಪ್ರತಿನಿಧಿಗಳನ್ನು ಕರೆಯಿಸಿ ಸಭೆ ನಡೆಸುವುದು.
2. ಗ್ರಾಮೀಣ ಅಭಿವೃದ್ಧಿ ಇಲಾಖೆಯಿಂದ Deemed Approval ರೂಪದಲ್ಲಿ ಇತ್ಯರ್ಥವಾಗಿರುವ ಪ್ರಕರಣಗಳಲ್ಲಿ BSNL 92 ಹಾಗು RJIL 1950 ಪ್ರಕರಣಗಳಿಗೆ RoW ಶುಲ್ಕ ಪಾವತಿಸಲು ಬಾಕಿ ಉಳಿಸಿಕೊಂಡಿದ್ದು ಅದನ್ನು ಕೂಡಲೇ ಪಾವತಿಸಿ ಕಾಮಗಾರಿಗಳನ್ನು ನಡೆಸುವುದು.
3. 4G Saturation ಯೋಜನೆಯ ROW ಶುಲ್ಕ ಪಾವತಿಗೆ ವಿನಾಯಿತಿ ಬಗ್ಗೆ BSNL ಗ್ರಾಮೀಣ ಅಭಿವೃಧ್ಧಿ ಇಲಾಖೆಗೆ ಅಗತ್ಯ ಪ್ರಸ್ತಾವನೆ ಸಲ್ಲಿಸುವುದು.
4. BBMP ಮತ್ತು UDD Portal ಗಳಲ್ಲಿ Deemed approval ಗೆ ಅವಕಾಶ ಮಾಡುವುದು.
5. PM Gatishakti NMP Portal ಗೆ ಇಲಾಖಾ Portal ನಿಂದ ಸಂಪರ್ಕ ಕಲ್ಪಿಸುವುದು.

**(ಕ್ರಮ:** ಅಪರ ಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಮುಖ್ಯ ಆಯುಕ್ತರು, ಬಿ.ಬಿ.ಎಂ.ಪಿ ಪ್ರಧಾನ ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ, ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ನಿರ್ದೇಶಕರು, ಪೌರಾಡಳಿತ ಇಲಾಖೆ, ಆಯುಕ್ತರು, ಪಂಚಾಯತ್ ರಾಜ್ ಇಲಾಖೆ, ಜಂಟಿ ನಿರ್ದೇಶಕರು, (MRC), ಮುಖ್ಯ ಪ್ರಧಾನ ವ್ಯವಸ್ಥಾಪಕರು, BSNL, ನಿರ್ದೇಶಕರು, DoT, LSA., CEO, RJIL, DGM, KSIIDC).

**ವಿಷಯ: 3. RoW ಮತ್ತು MoHUA ಮಾರ್ಗ ಸೂಚಿ ತಿದ್ದುಪಡಿಗಳನ್ನು ತರುವ ಕುರಿತು**

ಟೆಲಿಕಾಂ RoW ನಿಯಮಗಳು 2016 ಕ್ಕೆ ಭಾರತ ಸರ್ಕಾರವು ಕೆಲವು ತಿದ್ದುಪಡಿಗಳನ್ನು ತರಲು ಸೂಚಿಸಿದ್ದು ಆ ತಿದ್ದುಪಡಿ ನಿಯಮಗಳು ಇದುವರೆಗೆ ರಾಜ್ಯದ ನಿಯಮಗಳಲ್ಲಿ ಅಳವಡಿಕೆ ಯಾಗಿಲ್ಲ. ಹಾಗೆಯೇ MoHUA ದಿಂದ ಕಳಿಸಿರುವ ಕಟ್ಟಡ ನಿರ್ಮಾಣ ಬೈಲಾ ಮಾದರಿ ತಿದ್ದುಪಡಿ ನಿಯಮಗಳನ್ನು ಸಹ ರಾಜ್ಯದಲ್ಲಿ ಅಳವಡಿಕೆ ಮಾಡದೆ ಇರುವ ವಿಷಯಗಳನ್ನು ಸಭೆಯಲ್ಲಿ ಪ್ರಸ್ತಾಪಿಸಲಾಯಿತು. RoW ತಿದ್ದುಪಡಿ ನಿಯಮಗಳು ಈಗ ಪ್ರಸ್ತಾವನೆಯಲ್ಲಿರುವ ಏಕೀಕೃತ RoW ನೀತಿಯಲ್ಲಿ ಅಳವಡಿಕೆಯಾಗಿವೆ. ಆದ್ದರಿಂದ ಇತರೆ ಇಲಾಖೆಗಳಲ್ಲಿರುವ ROW ನಿಯಮಗಳಿಗೆ ಪ್ರತ್ಯೇಕ ತಿದ್ದುಪಡಿ ತರುವ ಅವಶ್ಯಕತೆ ಇಲ್ಲವೆಂದು ವಿಮಾತಂ, ಜೈತಂ ಮತ್ತು ವಿತಂ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗಳು ಸಭೆಗೆ ತಿಳಿಸಿದರು. ಕಟ್ಟಡ ನಿರ್ಮಾಣ ಬೈಲಾ ತಿದ್ದುಪಡಿ ಪ್ರಸ್ತಾವನೆಯು ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿಯವರ ಪರಿಶೀಲನೆಯಲ್ಲಿ ಹಲವು ತಿಂಗಳುಗಳಿಂದ ಬಾಕಿ ಉಳಿದಿದ್ದು ಅದನ್ನು ಕೂಡಲೇ ಅನುಷ್ಠಾನಕ್ಕೆ ತರುವಂತೆ ಕೋರಲಾಯಿತು. ಚರ್ಚೆಯ ನಂತರ ಕೆಳಗಿನ ತೀರ್ಮಾನಗಳನ್ನು ಕೈಗೊಳ್ಳಲಾಯಿತು.

1. ರಾಜ್ಯಕ್ಕೆ ಏಕೀಕೃತ ROW ನಿಯಮಗಳನ್ನು ಜಾರಿ ಮಾಡುವ ಅವಶ್ಯಕತೆಯನ್ನು UDD ಇಲಾಖೆಯು ಸರ್ಕಾರಕ್ಕೆ ಮನವರಿಕೆ ಮಾಡಿ ಇಲಾಖೆ ಅಭಿಪ್ರಾಯದೊಂದಿಗೆ ಕಡತವನ್ನು ತುರ್ತಾಗಿ ಆಡಳಿತ ಇಲಾಖೆಗೆ ಹಿಂತಿರುಗಿಸುವುದು.
2. ಆಡಳಿತ ಇಲಾಖೆಯು ಶೀಘ್ರವಾಗಿ ಈ ಪ್ರಸ್ತಾವನೆಯನ್ನು ಸಚಿವ ಸಂಪುಟದ ಅನುಮೋದನೆಗೆ ಮಂಡಿಸುವುದು.
3. MoUHA ಮಾರ್ಗ ಸೂಚಿಯಂತೆ ಕಟ್ಟಡ ನಿರ್ಮಾಣ ಬೈಲಾಕ್ಕೆ ತಿದ್ದುಪಡಿ ತರುವ ಕುರಿತು ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದು ಶೀಘ್ರವಾಗಿ ಅಧಿಸೂಚನೆ ಹೊರಡಿಸಲು ಕಾರ್ಯದರ್ಶಿ, UDD ರವರು ಕ್ರಮ ಕೈಗೊಳ್ಳುವುದು.

**(ಕ್ರಮ:** ಅಪರ ಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ವಿಮಾತಂ, ಜೈತಂ ಮತ್ತು ವಿತಂ ಇಲಾಖೆ, ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ).

**ವಿಷಯ: 4. CBuD ಅನುಷ್ಠಾನ ಕುರಿತು**

ರಾಜ್ಯದಲ್ಲಿ ರಸ್ತೆ ಹಾಗು ಸಾರ್ವಜನಿಕ ಸ್ಥಳಗಳಲ್ಲಿ ಗುಂಡಿಗಳನ್ನು ತೋಡುವಾಗ ಆ ಪ್ರದೇಶದಲ್ಲಿ ಮೊದಲೆ ಇರುವ ಕೇಬಲ್, ಪೈಪ್-ಲೈನ್ ಇತ್ಯಾದಿ ಭೂಮಿ ಒಳಗಿನ ಸ್ವತ್ತುಗಳ ರಕ್ಷಣೆ ಮಾಡಿಕೊಳ್ಳಲು ಸಂಬಂಧಿಸಿದವರಿಗೆ CBuD app ಮೂಲಕ ಮುಂಗಡ ಮಾಹಿತಿ ಕಳಿಸಿ ಗುಂಡಿಗಳನ್ನು ತೋಡುವ ಕಾರ್ಯ ನಡಸಬೇಕೆಂಬ ನಿಯಮ ಜಾರಿಯಲ್ಲಿದೆ. ಅದನ್ನು ಕಡ್ಡಾಯವಾಗಿ ಪಾಲಿಸುವಂತೆ ಮುಖ್ಯ ಕಾರ್ಯದರ್ಶಿಗಳಿಂದ ನಿರ್ದೇಶನ ನೀಡಲ್ಪಟ್ಟಿದರು ಅದು ಜಾರಿಗೆ ಬಂದಿಲ್ಲ ಎಂಬ ವಿಚಾರವನ್ನು ಸಭೆಯ ಗಮನಕ್ಕೆ ತರಲಾಯಿತು. ರಾಜ್ಯದ ಎಲ್ಲ ಯುಟಿಲಿಟಿ ಏಜೆನ್ಸಿಗಳು CBuD app ನಲ್ಲಿ ಮುಂಗಡ ಮಾಹಿತಿ ನೀಡದೆ ರಸ್ತೆ ಇತ್ಯಾದಿ ಸಾರ್ವಜನಿಕ ಸ್ಥಳಗಳಲ್ಲಿ ಗುಂಡಿಗಳನ್ನು ತೊಡುವ ಕಾರ್ಯ ನಡೆಸದಿರುವಂತೆ ಕ್ರಮ ವಹಿಸಲು ಎಲ್ಲ ಇಲಾಖಾ ಮುಖ್ಯಸ್ಥರಿಗೆ ಸೂಚಿಸಲಾಯಿತು. BWSSB ಯಿಂದ ಅಡ್ಮಿನ್ ಗಳ ನೇಮಕಾತಿಯಾಗಿಲ್ಲವೆಂಬ ವಿಚಾರ ಗಮನಕ್ಕೆ ಬಂದಾಗ ಅದನ್ನು ಕೂಡಲೇ ಮಾಡಿಸುವಂತೆ ಅಪರ ಮುಖ್ಯ ಕಾರ್ಯದರ್ಶಿ, UDD ರವರನ್ನು ಕೋರಲಾಯಿತು. **[ಕ್ರಮ:** ಅಪರ ಮುಖ್ಯ ಕಾರ್ಯದರ್ಶಿಗಳು-ನಗರಾಭಿವೃದ್ಧಿ ಇಲಾಖೆ, ಮುಖ್ಯ ಆಯುಕ್ತರು, ಬಿ.ಬಿ.ಎಂಪಿ, ಅಧ್ಯಕ್ಷರು, BWSSB, ಜಂಟಿ ನಿರ್ದೇಶಕರು, (MRC)].

**ವಿಷಯ:5. ಪ್ರಧಾನ ಮಂತ್ರಿಗಳ ಗತಿಶಕ್ತಿ - NMP ಪೋರ್ಟಲ್ ನಲ್ಲಿ ಮಾಹಿತಿಗಳನ್ನು ಹಾಕಿಸುವ ಕುರಿತು.**

ಪ್ರಧಾನ ಮಂತ್ರಿಗಳ ಗತಿಶಕ್ತಿ NMP ಪೋರ್ಟಲ್ ನಲ್ಲಿ ಮಾಹಿತಿಗಳನ್ನು ಹಾಕುವ ಕೆಲಸವು ತೃಪ್ತಿದಾಯಕವಾಗಿ ನಡೆದಿದೆಯಾದರೂ ಅದನ್ನು ಸರಿಯಾದ ನಮೂನೆಯಲ್ಲಿ (Format) ತುಂಬಿಲ್ಲವೆಂಬ ವಿಚಾರವನ್ನು ಸಭೆಯ ಗಮನಕ್ಕೆ ತರಲಾಯಿತು. ಅದನ್ನು ಸರಿಪಡಿಸುವುದಾಗಿ NMP ಪೋರ್ಟಲ್ ನೋಡಲ್ ಅಧಿಕಾರಿಯಾದ ಶ್ರೀ ಈಶ್ವರ್, DGM, KSIIDC ರವರು ಸಭೆಗೆ ತಿಳಿಸಿದರು. **(ಕ್ರಮ:** ನಿರ್ದೇಶಕರು, KSRSAC. and DGM, KSIIDC.)

**ವಿಷಯ: 6. FTTH Saturation Project**

BBNL ಜಾರಿಗೊಳಿಸುತ್ತಿರುವ 'ಗ್ರಾಮ ಪಂಚಾಯತಿಗಳಿಗೆ ಬ್ರಾಡ್ ಬ್ಯಾಂಡ್ ಸಂಪರ್ಕ' ಕಲ್ಪಿಸುವ ಯೋಜನೆಯಡಿ ಈಗಾಗಲೆ ಗ್ರಾಮ ಪಂಚಾಯ್ತಿಗಳಿಗೆ ಅಂತರ್ಜಾಲದ ಸೌಲಭ್ಯ ಸಿಕ್ಕಿದೆ. ಅಲ್ಲಿಂದ ಪಂಚಾಯಿತಿಗಳ ವ್ಯಾಪ್ತಿಗಳಲ್ಲಿ ಬರುವ ಶಾಲೆ, PHC, ಅಂಗನವಾಡಿ, ಗ್ರಂಥಾಲಯ ಇತ್ಯಾದಿಗಳಿಗೆ ಸಂಪರ್ಕ ಕಲ್ಪಿಸಲು ತಗಲುವ ನಿರ್ವಹಣಾ ವೆಚ್ಚವನ್ನು ಭರಿಸಲು ಸಾಧ್ಯವಿಲ್ಲವೆಂದು ಕೇಂದ್ರ ಸರ್ಕಾರಕ್ಕೆ ವರದಿಮಾಡುವಂತೆ ಈ ಹಿಂದೆಯೇ ಸೂಚನೆ ನೀಡಲಾಗಿದೆ. ಆದರೆ ಗ್ರಾಮಪಂಚಾಯ್ತಿ ಕೇಂದ್ರದಿಂದ ಅದರ ವ್ಯಾಪ್ತಿಯೊಳಗೆ ಬರುವ ಉದ್ಯಮಿಗಳು ಮತ್ತು ಆಸಕ್ತ ನಾಗರಿಕರಿಗೆ ಇಂಟರ್ನೆಟ್ ಸೌಲಭ್ಯ ಕಲ್ಪಿಸಲು ಅವಕಾಶವಾಗುವಂತೆ ಪಂಚಾಯತಿಗಳಲ್ಲಿ ಇ ಸರ್ವರ್ ರೂಮ್ ಸ್ಥಾಪಿಸಲು TIP ಗಳಿಗೆ ಅವಕಾಶ ಮಾಡಿಕೊಡುವಂತೆ ಪಂಚಾಯತ್ ರಾಜ್ ಇಲಾಖೆ ರವರಿಗೆ ಸೂಚಿಸಬೇಕೆಂದು ಕೋರಲಾಯಿತು. ನಿರ್ದೇಶಕರು ಪಂಚಾಯತ್ ರಾಜ್ ರವರು ಈ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ತಿಳಿಸಲಾಯಿತು.**(ಕ್ರಮ:** ಕಾರ್ಯದರ್ಶಿಗಳು, e-Governance, ಆಯುಕ್ತರು, ಪಂಚಾಯತ್ ರಾಜ್ ಇಲಾಖೆ., ಮುಖ್ಯ ಪ್ರಧಾನ ವ್ಯವಸ್ಥಾಪಕರು, BBNL.)

**ವಿಷಯ: 7. ಕೌಶಲ್ಯ ಅಭಿವೃದ್ಧಿ ಯೋಜನೆ ಕುರಿತು**

ಟೆಲಿಕಾಂ ವಲಯದಲ್ಲಿ ಅವಿಷ್ಕಾರಗೊಂಡಿರುವ 5G ತಂತ್ರಜ್ಞಾನವು ಮುಂಬರುವ ದಿನ ಗಳಲ್ಲಿ ಹೆಚ್ಚಿನ ಉದ್ಯೋಗಗಳನ್ನು ಸೃಷ್ಟಿಸುವ ಸಾಧ್ಯತೆ ಇದೆ. ಆದ್ದರಿಂದ ಯುವಜನರಿಗೆ ICT ವಿಷಯಗಳಲ್ಲಿ ಶಿಕ್ಷಣ ಮತ್ತು ತರಬೇತಿಯನ್ನು ನೀಡುವ ಕ್ರಮ ಆಗಬೇಕೆಂದು ಸಭೆಗೆ ತಿಳಿಸಲಾಯಿತು. ಇದರ ಸಂಬಂಧ ಈಗಾಗಲೇ ಸಂಬಂದಿತ ಇಲಾಖೆಗಳಿಗೆ ಪತ್ರ ಬರೆದು ತಿಳಿಸಲಾಗಿದೆಯೆಂದು ಅಪರ ಮುಖ್ಯ ಕಾರ್ಯದರ್ಶಿಗಳು, ವಿಮಾತಂ, ಜೈತಂ ಮತ್ತು ವಿತಂ ಇಲಾಖೆ ರವರು ಸಭೆಗೆ ತಿಳಿಸಿದರು. ಯುವಜನರಿಗೆ ICT ವಿಷಯಗಳಲ್ಲಿ ತರಬೇತಿ ನೀಡುವ

ಕಾರ್ಯಕ್ರಮವನ್ನು ಕೌಶಲ್ಯಾಭಿವೃಧ್ಧಿ ಇಲಾಖೆಯಿಂದ ಈಗಾಗಲೆ ನಡೆಸಲಾಗುತ್ತಿದೆ ಎಂದು ವ್ಯವಸ್ಥಾಪಕ ನಿರ್ದೇಶಕರು ಕೌಶಲ್ಯಾಭಿವೃಧ್ಧಿ ಮಿಶನ್ ರವರು ಸಭೆಗೆ ತಿಳಿಸಿದರು. ಮುಖ್ಯ ಕಾರ್ಯದರ್ಶಿಗಳು ಕೌಶಲ್ಯ ಅಭಿವೃದ್ಧಿ ಮತ್ತು ಉನ್ನತ ಶಿಕ್ಷಣ ಇಲಾಖೆಗಳು ITI ಮತ್ತು Polytechnic ಶಿಕ್ಷಣ ಸಂಸ್ಥೆಗಳಲ್ಲಿ ICT ವಿಷಯಗಳ ಕೋರ್ಸುಗಳನ್ನು ತೆರೆಯಬೇಕೆಂದು ಸೂಚಿಸಿದರು.
**(ಕ್ರಮ:** ಅಪರ ಮುಖ್ಯ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಪ್ರಧಾನ ಕಾರ್ಯದರ್ಶಿಗಳು ಕೌಶಲ್ಯ ಅಭಿವೃದ್ಧಿ ಇಲಾಖೆ, ವ್ಯವಸ್ಥಾಪಕ ನಿರ್ದೇಶಕರು, ಕೌಶಲ್ಯ ಮಿಷನ್).

**ವಿಷಯ: 8. ಇತರೆ ವಿಷಯಗಳು**

COAI ಸಂಸ್ಥೆಯನ್ನು ಪ್ರತಿನಿಧಿಸಿದ ಶ್ರೀ ಧನಂಜಯರವರು ಲೋಕೋಪಯೋಗಿ ಇಲಾಖೆ ಯಿಂದ RoW ಅನುಮತಿ ತಡೆಹಿಡಿದಿರುವುದು ಸಮಸ್ಯೆಯಾಗಿದೆ. ಈ ತೀರ್ಮಾನವನ್ನು ಮಾರ್ಗಸೂಚಿ ರೂಪುಗೊಳ್ಳುವವರೆಗೆ ಕೈಬಿಡಬೇಕೆಂದು ಮತ್ತು ಟವರ್ ಗಳ ನಿರ್ಮಾಣಕ್ಕೆ ಜಿಲ್ಲಾಡಳಿತಗಳು ಸಹಕರಿಸುವಂತೆ ನಿರ್ದೇಶನ ನೀಡಬೇಕೆಂದು ಕೋರಿದರು.

ಶ್ರೀ ಟಿ. ಆರ್. ದುವಾ, D.G, DIPA ರವರು ಮಾತನಾಡಿ RoW ಅರ್ಜಿಗಳನ್ನು ಸಲ್ಲಿಸಲು ಬಿ.ಬಿ.ಎಂ.ಪಿ ಮತ್ತು UDD ಪೋರ್ಟಲ್ ನಲ್ಲಿ ಸಾಕಷ್ಟು ಸಮಸ್ಯೆಗಳಿವೆ. ಅವುಗಳನ್ನು ಸರಿಪಡಿಸು ವಂತೆ ಕೋರಿದರು. ಹಾಗೆಯೆ OFC ಅಳವಡಿಸಲು ತೋಡುವ ಗುಂಡಿಗಳನ್ನು ಮುಚ್ಚುವುದಕ್ಕೆ ವಿಧಿಸುವ ಧರವು (Restoration Charges) ಒಂದೊಂದು ಕಡೆ ಒಂದೊಂದು ರೀತಿಯಲ್ಲಿದ್ದು ಅದಕ್ಕೆ ಸೂಕ್ತ ಮಾರ್ಗಸೂಚಿಯಾಗಬೇಕೆಂತಲು ಮತ್ತು ಹೊಸದಾಗಿ ನಿರ್ಮಾಣಗೊಳ್ಳುವ ಬಹುಮಹಡಿ ಕಟ್ಟಡಗಳಲ್ಲಿ ಟೆಲಿಕಾಂ ಸಂಪರ್ಕ ಕಲ್ಪಿಸಲು ಅವಕಾಶವಾಗುವಂತೆ, ಕಟ್ಟಡ ನಿರ್ಮಾಣ ಬೈಲಾದಲ್ಲಿ ತುರ್ತಾಗಿ ತಿದ್ದುಪಡಿ ಆಗಬೇಕೆಂದು ಕೋರಿದರು.

ಟೆಲಿಕಾಂ ಮೂಲ ಸೌಲಭ್ಯ ಅಭಿವೃದ್ಧಿ ಮತ್ತು ಸೇವಾ ಸಂಸ್ಥೆಗಳ ಅಹವಾಲುಗಳನ್ನು ಬರವಣಿಗೆಯಲ್ಲಿ ತರಿಸಿಕೊಂಡು DoT ಹಂತದಲ್ಲಿ ಒಮ್ಮೆ ಪರಿಶೀಲಿಸಿ ರಾಜ್ಯ ಸರ್ಕಾರದಿಂದ ಆಗಬೇಕಾದ ಕ್ರಮಗಳ ಕುರಿತು ಸಂಬಂಧ ಪಟ್ಟ ಇಲಾಖೆಗಳಿಗೆ ಪತ್ರದ ಮೂಲಕ ತಿಳಿಸಲು DoT, ನಿರ್ದೇಶಕರಿಗೆ ಸೂಚಿಸಲಾಯಿತು.
**(ಕ್ರಮ:** ಮುಖ್ಯ ಆಯುಕ್ತರು, ಬಿ.ಬಿ.ಎಂ.ಪಿ, ಪ್ರಧಾನ ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ., ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಸಲಹಗಾರ/ ಹಿರಿಯ ಸಲಹೆಗಾರರು, DDG of DoT Licensed Service Area (SA), ಕರ್ನಾಟಕ, ನಿರ್ದೇಶಕರು, ಪೌರಾಡಳಿತ ಇಲಾಖೆ, ಆಯುಕ್ತರು, ಪಂಚಾಯತ್ ರಾಜ್ ಇಲಾಖೆ., ನಿರ್ದೇಶಕರು, ವಿಮಾತಂ ಮತ್ತು ಜೈತಂ ಇಲಾಖೆ, ಜಂಟಿ ನಿರ್ದೇಶಕರು, (MRC).

ವಂದಿತಾ ಶರ್ಮಾ

**(ವಂದಿತಾ ಶರ್ಮಾ)**
ಸರ್ಕಾರದ ಮುಖ್ಯ ಕಾರ್ಯದರ್ಶಿ
ಕರ್ನಾಟಕ ಸರ್ಕಾರ